<u>ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ..... ಚಿತ್ತಾಪೂರ</u>

C.C No. 511/2015
CW-4 PW- 4

ಹೆಸರು : ರಾಮು

ತಂದೆಯ ಹೆಸರು: ಬೋಮು

ವಯಸ್ಸು : 54 ವರ್ಷ

ಉದ್ಯೋಗ : ಎ.ಎಸ್.ಐ.

ವಾಸ ಸ್ಥಳ : ಫರ್ತಾಬಾದ್

---

<u>ಪ್ರಮಾಣವಚನ ಬೋಧಿಸಲಾಯಿತು. ದಿಃ 06-01-2026</u>

<u>ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರಿಂದ</u>

ನಾನು 2015 ರಿಂದ 2020ರವರೆಗೆ ಮಾಡಬೂಳ್ ಪೋಲೀಸ್ ಠಾಣೆಯಲ್ಲಿ ಮುಖ್ಯ ಪೇದೆ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 23.09.2015ರಲ್ಲಿ ನಾನು ಮತ್ತು ಚಾಸಾ-5ರವರು ಪೋಲೀಸ್ ಠಾಣೆಯಲ್ಲಿದ್ದಾಗ ಚಾಸಾ-1ರವರು ನಮಗೆ ಪೆಟ್ರೋಲಿಂಗ್ ಹೋಗಲು ಕರೆದರು. ಆಗ ನಾನು, ಚಾಸಾ-5 ಮತ್ತು ಚಾಸಾ-1ರವರು ಇಲಾಖಾ ವಾಹನದಲ್ಲಿ ಮುಗುಟಾ ಗ್ರಾಮ, ದಂಡೋತಿ ಕಡೆಗೆ ಹೋಗಿ ಮಧ್ಯಾಹ್ನ 03.30 ಗಂಟೆಗೆ ದಂಡೋತಿ ತಲುಪಿದಾಗ ಚಾಸಾ-1ರವರಿಗೆ ಬಾಗೋಡಿ ಕ್ರಾಸ್ ನ ಬಳಿ ಅಕ್ರಮವಾಗಿ ಮರಳು ಸಾಗಾಣಿಕೆ ಆಗುತ್ತಿದೆ ಎಂದು ಬಾತ್ಮಿ ಬಂದಿರುತ್ತದೆ. ಆದ ಕಾರಣ ನಾವು ಅಲ್ಲಿಂದ ಬಾಗೋಡಿ ಕ್ರಾಸ್ ಬಳಿ ಸಂಜೆ 04.00 ಗಂಟೆಗೆ ಬಂದು ತಲುಪಿದಾಗ ಮುಂದಿನಿಂದ ಒಂದು ಟ್ರ್ಯಾಕ್ಟರ್ ಸಾದಾ ಮರಳು ತುಂಬಿಕೊಂಡು ಬರುತ್ತಿದ್ದಿದ್ದು ಕಂಡು ಬಂತು. ನಾವು ಸದರಿ ಟ್ರ್ಯಾಕ್ಟರ್ ನ್ನು ಕೈಸನ್ನೆ ಮಾಡಿ ನಿಲ್ಲಿಸಲು ಹೇಳಿದಾಗ ಸದರಿ ಟ್ರ್ಯಾಕ್ಟರ್ ನ ಚಾಲಕ ವಾಹನವನ್ನು ಅಲ್ಲಿಯೇ ಬಿಟ್ಟು ಓಡಿ ಹೋಗಿರುತ್ತಾನೆ. ಆಗ ಚಾಸಾ-1ರವರು ಚಾಸಾ- 2 ಮತ್ತು 3ರವರನ್ನು ಪಂಚರಾಗಿ ಬರಮಾಡಿಕೊಂಡರು. ಸದರಿ ಟ್ರ್ಯಾಕ್ಟರ್ ಗೆ ಯಾವುದೇ ನೋಂದಣಿ ಸಂಖ್ಯೆ ಇಲ್ಲದಿದ್ದ ಕಾರಣ ಬಾತ್ಮಿದಾರರಿಗೆ ಚಾಸಾ-1ರವರು ಕೇಳಿಕೊಂಡು ಸದರಿ ಟ್ರ್ಯಾಕ್ಟರ್ ನ ಚಾಲಕನ ಹೆಸರು ಅಂಬರೀಶ್ ಮತ್ತು ಮಾಲಿಕನ ಹೆಸರು ಶರಣಪ್ಪ ಎಂದು ತಿಳಿದುಕೊಂಡರು. ನಂತರ ಬೇರೆ ಚಾಲಕನ ಸಹಾಯದಿಂದ ಟ್ರ್ಯಾಕ್ಟರ್ ನ್ನು ಪೋಲೀಸ್ ಠಾಣೆಗೆ ತೆಗೆದುಕೊಂಡು ಬಂದು

ಪಂಚನಾಮೆಯನ್ನು ಜರುಗಿಸಲಾಯಿತು. ನಂತರ ಚಾಸಾ-6 ರವರಿಗೆ ನಾನು ಸ್ಥಳವನ್ನು ತೋರಿಸಿರುತ್ತೇನೆ. ನಾನು ಪ್ರಕರಣದ ಕುರಿತು ಚಾಸಾ-6ರವರಿಗೆ ನನ್ನ ಹೇಳಿಕೆಯನ್ನು ನೀಡಿರುತ್ತೇನೆ. ಈಗ ನ್ಯಾಯಲಯದ ಮುಂದಿರುವ 1ನೇ ಆರೋಪಿತನೇ ಆ ದಿನ ಟ್ರ್ಯಾಕ್ಟರ್ ಬಿಟ್ಟು ಓಡಿ ಹೋದ ವ್ಯಕ್ತಿಯಾಗಿರುತ್ತಾನೆ.

<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ.ಎಸ್.ಬಿ.ಕೆ. ವಕೀಲರಿಂದ</u>

ನಾವು ಆ ದಿನ ಬಾಗೋಡಿ ಕ್ರಾಸ್ ನ ಬಳಿ ಇರುವ ಸೇತುವೆಯ ಪಕ್ಕದಲ್ಲಿ ನಿಂತು ವಾಚ್ ಮಾಡುತ್ತಿದ್ದೆವು. ನಾವು ವಾಚ್ ಮಾಡುತ್ತಿದ್ದಾಗ ಈ ಪ್ರಕರಣದ ವಾಹನ ಬಿಟ್ಟು ಬೇರೆ ವಾಹನಗಳು ಬಂದ ಬಗ್ಗೆ ನಾನು ಗಮನಿಸಿಲ್ಲ. ಸದರಿ ಟ್ರ್ಯಾಕ್ಟರ್ ನಲ್ಲಿ ಆರೋಪಿತನೊಬ್ಬನೇ ಇದ್ದ. ಆ ದಿನ 1ನೇ ಆರೋಪಿತ ಟ್ರ್ಯಾಕ್ಟರ್ ನಿಂದ ಇಳಿದು ಇವಣಿ ಬಳಿಯ ಒಂದು ಕೃಷಿ ಜಮೀನಿನಲ್ಲಿ ಓಡಿ ಹೋಗಿರುತ್ತಾನೆ. ಆ ದಿನ 1ನೇ ಆರೋಪಿತ 50-100 ಮೀ. ದೂರದಲ್ಲಿ ಟ್ರ್ಯಾಕ್ಟರ್ ನಿಲ್ಲಿಸಿ ಓಡಿ ಹೋದ ಕಾರಣ ನಾವು ಆತನನ್ನು ಹಿಡಿಯಲು ಪ್ರಯತ್ನಿಸಿಲ್ಲ. ನಾವು ಆ ದಿನ ಓಡಿ ಹೋದ ವ್ಯಕ್ತಿ ಯಾವ ಬಣ್ಣದ ಬಟ್ಟೆ ಧರಿಸಿದ್ದ ಎಂದು ನೋಡಿಲ್ಲ. ಚಾಸಾ-1 ರವರು ಪಂಚರನ್ನು ಕರೆಸಿರುತ್ತಾರೆ. ಪಂಚರು ಯಾವ ಊರಿನವರೆಂದು ನನಗೆ ಹೇಳಲು ಬರುವುದಿಲ್ಲ. ಘಟನಾ ಸ್ಥಳದಲ್ಲಿ ಯಾವುದೇ ಪಂಚನಾಮೆಯನ್ನು ಜರುಗಿಸಲಾಗಿಲ್ಲ. ಸಾಕ್ಷಿ ಮುಂದುವರಿದು ಪೋಲೀಸ್ ಠಾಣೆಯಲ್ಲಿ ಪಂಚನಾಮೆ ಜರುಗಿಸಲಾಗಿದೆ ಎಂದು ನುಡಿಯುತ್ತಾರೆ. ನನ್ನ ಪ್ರಕಾರ 2 ಪಂಚನಾಮೆಗಳನ್ನು ಮಾಡಲಾಗಿದೆ. 1 ಪಂಚನಾಮೆಯನ್ನು ಪೋಲೀಸ್ ಠಾಣೆಯಲ್ಲಿ ಮತ್ತು 1 ಪಂಚನಾಮೆಯನ್ನು ನಾನು ಸ್ಥಳ ತೋರಿಸಿದಾಗ ಮಾಡಲಾಗಿದೆ. ಪಂಚರು ಘಟನಾ ಸ್ಥಳದ ಪಂಚನಾಮೆಗೆ ಘಟನಾ ಸ್ಥಳದಲ್ಲಿ ಸಹಿ ಮಾಡಿದ್ದು ಇರುತ್ತದೆ. ಸದರಿ ಘಟನಾ ಸ್ಥಳದ ಪಂಚನಾಮೆಯನ್ನು ಸಂಜೆ 08.30 ರಿಂದ 09.30 ಗಂಟೆ ಸಮಯದಲ್ಲಿ ಜರುಗಿಸಲಾಯಿತು. ನನ್ನ ಪ್ರಕಾರ 1ನೇ ಆರೋಪಿತನೇ ಆ ದಿನ ಟ್ರ್ಯಾಕ್ಟರ್ ಚಲಾಯಿಸುತ್ತಿದ್ದ ಎಂದು ಚಾಸಾ- 2 ಮತ್ತು 3 ರವರು ತಿಳಿಸಿರುತ್ತಾರೆ. ನನ್ನ ಪ್ರಕಾರ ಚಾಸಾ- 2 ಮತ್ತು 3ರವರು ಸ್ಥಳದಲ್ಲಿ ಸಂಜೆ 04.00 ಗಂಟೆಗೆ ಯಾವುದೇ ಸಹಿ ಮಾಡಿಲ್ಲ. ಚಾಸಾ-2 ಮತ್ತು 3ರವರನ್ನು ಚಾಸಾ-6 ರವರು 08.00 ಗಂಟೆಗೆ ಮತ್ತೆ ಘಟನಾ ಸ್ಥಳಕ್ಕೆ ಕರೆದುಕೊಂಡು ಬಂದಿರುತ್ತಾರೆ. ನಿಮಗೆ ಯಾವುದೇ ಬಾತ್ಮಿ ಬಂದಿಲ್ಲ, ನೀವು ಯಾವುದೇ ಸ್ಥಳಕ್ಕೆ ಹೋಗಿ ಯಾವುದೇ ಟ್ರ್ಯಾಕ್ಟರ್ ನ್ನು ಅಮಾನತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ನೀವು ಯಾವುದೇ ಸ್ಥಳವನ್ನು ತೋರಿಸಿದ ಮೇರೆಗೆ ಯಾವುದೇ ಪಂಚನಾಮೆಯನ್ನು ಜರುಗಿಸಲಾಗಿಲ್ಲ ಎಂದರೆ ಸರಿಯಲ್ಲ. ನೀವು ಚಾಸಾ-6 ರವರಿಗೆ ಯಾವುದೇ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ. ನೀವು 1ನೇ

ಆರೋಪಿಯನ್ನು ಎಂದಿಗೂ ನೋಡಿಲ್ಲ ಎಂದರೆ ಸರಿಯಲ್ಲ. ನಿಮ್ಮ ಮೇಲಧಿಕಾರಿಯಾದ ಚಾಸಾ-1ರವರು ಮಾಡಿದ ಸುಳ್ಳು ಪ್ರಕರಣಕ್ಕೆ ಪೂರಕವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು )

ಓ. ಹೇ ಕೇ.ಸರಿ ಇದೆ.

ಸಿವಿಲ್ & J.M.F.C ನ್ಯಾಯಾಧೀಶರು,

ಚಿತ್ತಾಪೂರ.